ಈಗ ಊರಿನ ಕೆಲವು ಜನರು ಬಂದು ನೋಡಿ 'ಪ್ರಾಣ ಹೋಗಿಬಿಟ್ಟಿದೆ. ಹೃದಯಾಘಾತ ಆಗಿರಬೇಕು' ಎಂದರು. ನನ್ನ ತಮ್ಮನ ಮನೆಗೆ ಹೋಗಿದ್ದ ಸಾವಿತ್ರಿ ವಿಷಯ ತಿಳಿದು ಎದ್ದುಬಿದ್ದು ಓಡಿ ಬಂದು ಏನೂ ಮಾತನಾಡಲಾರದೆ ನನ್ನ ದೇಹದ ಮುಂದೆ ಕುಸಿದು ಬಿದ್ದಳು. ಅಲ್ಲಿದ್ದ ಜನರೆಲ್ಲ ಸಮಾಧಾನ ಪಡಿಸುತ್ತಿದ್ದರು. ಅಲ್ಲಿಗೆ ನನ್ನ ಪ್ರಾಣಪಕ್ಷಿ ಸಂಪೂರ್ಣವಾಗಿ ಹಾರಿ ಹೋಗಿರುವುದನ್ನು ದೃಢಪಡಿಸಿಕೊಂಡ ಜನರು ಮುಂದಿನ ಕಾರ್ಯಗಳಿಗೆ ಅಣಿಯಾದರು. ತೋಟದಲ್ಲಿ ಕೆಲಸ ಮಾಡುತ್ತಿದ್ದ ನನ್ನ ತಮ್ಮ ವೆಂಕಟೇಶನಿಗೆ ವಿಷಯ ತಿಳಿದು ಅವನೂ ಓಡಿ ಬಂದಿದ್ದ. ಜೊತೆಗೆ ಅವನ ಪತ್ನಿಯೂ ಅಳುತ್ತಲೇ ಓಡಿಬಂದಿದ್ದಳು.

ನನ್ನ ತಮ್ಮ ಓಡೋಡಿ ಬಂದು ನನ್ನ ದೇಹವನ್ನು ಮುಟ್ಟಿ ನೋಡಿ ನಾನು ಇಹಲೋಕವನ್ನು ಬಿಟ್ಟು ಹೋಗಿರುವ ವಿಷಯವನ್ನು ತಡೆಯಲಾಗದೆ 'ಅಣ್ಣ ನೀನು, ನನ್ನನ್ನ ಇಷ್ಟು ಬೇಗನೆ ಬಿಟ್ಟು ಹೋಗಿಬಿಟ್ಟೆಯಲ್ಲಣ್ಣ' ಎಂದು ಜೋರಾಗಿ ಗೋಳಾಡತೊಡಗಿದ. ಅಲ್ಲಿದ್ದವರೆಲ್ಲ ಎಷ್ಟೇ ಸಮಾಧಾನ ಮಾಡಿದರೂ ಅವನ ಕಣ್ಣೀರಕೋಡಿ ನಿಲ್ಲಲೇ ಇಲ್ಲ. ತಮ್ಮನ ಹೆಂಡತಿಯೂ 'ಅಯ್ಯೋ ಮಾವ ನಮ್ಮನ್ನೆಲ್ಲ ಬಿಟ್ಟು ಹೋಗಿಬಿಟ್ಟೆಯಲ್ಲ' ಎಂದು ಗೋಳಾಡುತ್ತಿದ್ದಳು. ಸುಮಾರು ಹೊತ್ತು ಇದೇ ರೀತಿಯಾಗಿ ನನ್ನ ದೇಹದ ಸುತ್ತಲೂ ಅವರ ರೋದನ ನಡೆದೇ ಇತ್ತು. ಊರಿನವರೆಲ್ಲ ಬಂದು ನನ್ನ ಬಗ್ಗೆ ಒಬ್ಬೊಬ್ಬರೂ ಒಂದೊಂದು ಮಾತು ಹೇಳುತ್ತಿದ್ದರು. ಒಂದಿಬ್ಬರು ದೂರದಲ್ಲಿ ನಿಂತು ಸಣ್ಣ ಧ್ವನಿಯಲ್ಲಿ 'ಹೋಗಿ ಹೋಗಿ ಸಾಯಂಕಾಲ ಸತ್ತೋದರಲ್ಲಪ್ಪ. ಊರಿಗೆ ಇದು ಒಳ್ಳೇದಲ್ಲ' ಎಂಬಂತೆ ಮಾತನಾಡುತ್ತಿದ್ದರು. ಕೊನೆಗೆ 'ಇದು ಊರಲ್ಲ. ಫಾರ್ಮ್‌ಹೌಸ್ ಬಿಡು' ಎಂದು ಸಮಾಧಾನ ಪಟ್ಟುಕೊಂಡರು.

ವಿಷಾದಕರ ವಿಷಯವೆಂದರೆ ನಾನು ಸಾಯುವಾಗ ನನ್ನ ಹತ್ತಿರ ನನ್ನ ಮಗ, ಮಗಳು ಇಬ್ಬರೂ ಇರಲಿಲ್ಲ. ಅವರು ಅಮೆರಿಕಾದಲ್ಲಿದ್ದಾರೆ. ಆದರೆ ನನ್ನ ಪತ್ನಿ ಸಾವಿತ್ರಿ ಇದೇ ಫಾರ್ಮ್‌ಹೌಸ್‌ನಲ್ಲಿ ನನ್ನ ಜೊತೆಗಿದ್ದರೂ ನನ್ನ ಪ್ರಾಣ ಹೋದಾಗ ಊರಿನ ಒಳಗಿದ್ದ ನಮ್ಮ ಮನೆಯಲ್ಲಿದ್ದಳು. ಈಗ ಎಲ್ಲರೂ ನನ್ನ ಸುತ್ತಲೂ ಫಾರ್ಮ್‌ಹೌಸ್‌ನಲ್ಲಿ ಸೇರಿದ್ದಾರೆ. ಹದಿನೈದು ವರ್ಷಗಳಿಂದಲೂ ನನ್ನ ಜೊತೆಗಿದ್ದು ನನಗೆ ಸೇವೆ ಮಾಡಿರುವ ನಾರಾಯಣ, ಅವನ ಪತ್ನಿ ಲಕ್ಷ್ಮೀಯೂ ಇದ್ದಾರೆ. ನಾರಾಯಣ ಫಾರ್ಮ್‌ಹೌಸ್‌ನಲ್ಲಿ ಕೆಲಸ ಮಾಡುತ್ತ ಒಂದು ಹಸುವನ್ನು ನೋಡಿಕೊಳ್ಳುತ್ತಿದ್ದಾನೆ. ಲಕ್ಷ್ಮೀ ಅಡಿಗೆ ಕೆಲಸದೊಂದಿಗೆ ತೋಟದ ಕೆಲಸವನ್ನೂ ಮಾಡುತ್ತಿದ್ದಳು. ಮಗಳು ಅಮೆರಿಕಾ ಹುಡುಗನನ್ನು ಮದುವೆ ಮಾಡಿಕೊಂಡು ಅಮೆರಿಕಾದಲ್ಲಿದ್ದರೆ ಮಗ ದೆಹಲಿಯ ಹುಡುಗಿಯನ್ನು ಮದುವೆ ಮಾಡಿಕೊಂಡು ಅಮೆರಿಕಾದಲ್ಲಿಯೇ ನೆಲೆಸಿದ್ದಾನೆ.

ನನ್ನ ತಮ್ಮ ಈಗ ಎಲ್ಲ ಮುಂದಿನ ಕೆಲಸಗಳ ಬಗ್ಗೆ ಸೂಚನೆ ನೀಡುತ್ತಿದ್ದ. ಜೊತೆಗೆ ಸಾಕಷ್ಟು ನೆಂಟರಿಷ್ಟರು ನನ್ನ ಹಳ್ಳಿಯಲ್ಲಿ ಇದ್ದುದರಿಂದ ಅವರೆಲ್ಲ ಫಾರ್ಮ್‌ಹೌಸ್‌ಗೆ ಧಾವಿಸಿ ಬಂದಿದ್ದರು. ಹಳ್ಳಿಯ ನನ್ನ ಕೆಲವು ಬಾಲ್ಯ ಸ್ನೇಹಿತರು ವಿಷಯ ತಿಳಿದು ಓಡಿ ಬಂದಿದ್ದರು. ಕೆಲವು ಮಹಿಳೆಯರು ಆಗಲೇ ಊರಿಗೆಲ್ಲ ಕೇಳಿಸುವಷ್ಟು ಜೋರಾಗಿ ಅಳುತ್ತಿದ್ದರು. ಪಕ್ಕದ ಹಳ್ಳಿಯಲ್ಲಿದ್ದ ನನ್ನ ಸೋದರತ್ತೆ ಮತ್ತು ಮಾವನವರಿಗೆ ವಿಷಯ ತಿಳಿಸಲು ನನ್ನ ತಮ್ಮ ಆಗಲೇ ಯಾರೋ ಹುಡುಗರ ಮೂಲಕ ಹೇಳಿ ಕಳುಹಿಸಿದ್ದ.

ಫಾರ್ಮ್‌ಹೌಸ್‌ನಲ್ಲಿ ನಾನು ತಂದು ಬೆಳೆಸಿದ್ದ ಗಿಡ ಮರಗಳೆಲ್ಲ ನನ್ನ ಕಡೆಗೆ ಸುಮ್ಮನೆ ನೋಡುತ್ತ ನಿಂತಿದ್ದವು. ಹೂವು, ಕಾಯಿ, ಹಣ್ಣುಗಳನ್ನು ಕೊಂಬೆಗಳಲ್ಲಿ ಹಿಡಿದುಕೊಂಡು ನಿಂತಿದ್ದ ಗಿಡಮರಗಳೆಲ್ಲ ದುಃಖಿಸುತ್ತಿರುವಂತೆ ಕಾಣಿಸುತ್ತಿದ್ದವು. ಕೆಲವು ಗಿಡಮರಗಳು ನನ್ನ ಜೊತೆಗೆ ಮಾತನಾಡಲು ಯತ್ನಿಸುತ್ತಿರುವಂತೆ ತೋರುತ್ತಿದ್ದವು. ನನ್ನ ಪತ್ನಿ ರಾಮಾಯಣದಲ್ಲಿ ರಾವಣನ ಕೈಗೆ ಸಿಕ್ಕಿಕೊಂಡ ಸೀತೆಯಂತೆ ಮೂರ್ಛೆ ಹೋಗಿ ನೆಲದಲ್ಲಿ ಬಿದ್ದುಬಿದ್ದು ಅಳುತ್ತಿದ್ದಳು. ನನ್ನ ಮಗ ಮತ್ತು ಮಗಳು ಯಾವಾಗ ಬರುತ್ತಾರೊ ಏನೊ ತಿಳಿಯಲಿಲ್ಲ. ನಾರಾಯಣನ ಪತ್ನಿ ಲಕ್ಷ್ಮೀ ವರಾಂಡಾದಲ್ಲಿದ್ದ ಹಸುವಿನ ಹತ್ತಿರ ನಿಂತು 'ಅಣ್ಣ, ಇಲ್ಲಿ ನೋಡಣ್ಣ ಹಸು ಕಣ್ಣಲ್ಲಿ ಕಣ್ಣೀರು ಬರ್ತಾ ಇರುವುದು?' ಎಂದು ಹತ್ತಿರದಲ್ಲಿದ್ದವರಿಗೆ ಕರೆದು ಹೇಳಿದಳು. ನಾನೂ ಆ ಕಡೆಗೆ ತಿರುಗಿ ನೋಡಿದೆ. ನಿಜವಾಗಿಯೂ ಹಸುವಿನ ಎರಡೂ ಕಣ್ಣುಗಳಲ್ಲಿ ನೀರು ಬರುತ್ತಿತ್ತು. ನಾನು ಸತ್ತಿರುವ ವಿಷಯ ಹಸುವಿಗೆ ತಿಳಿದು ಅದು ನನಗಾಗಿ ಅಳುತ್ತಿರಬಹುದೆ? ಅದೂ ಕೂಡ ಮನುಷ್ಯನಂತೆ ಒಂದು ಪ್ರಾಣಿಯಲ್ಲವೆ? ಅದರ ಬಗ್ಗೆ ನನಗೆ ಕನಿಕರ ಉಂಟಾಯಿತು.

ನನ್ನ ಶರೀರದಿಂದ ಹೊರಕ್ಕೆ ಬಂದು ಗೋಡೆಯ ಮೇಲೆ ಕುಳಿತಿರುವ ನಿರ್ವಿಕಾರವಾದ ದೆವ್ವವೊ? ಆತ್ಮವೊ? ಇಲ್ಲ ಪ್ರೇತಾತ್ಮವೊ? ಯಾವ ಮನುಷ್ಯನ ಕಣ್ಣಿಗೂ ಕಾಣದ, ಶಕ್ತಿ ಇಲ್ಲದ, ಏನೂ ಮಾಡಲಾಗದೆ ಆಕಾರವಿಲ್ಲದ ಒಂದು ಸಣ್ಣ ಪಕ್ಷಿಯಂತಹ ಒಂದು ವಾಯುಗೋಳ ಸುಮ್ಮನೆ ಕುಳಿತು ತನ್ನ ದೇಹದ ಕಡೆಗೆ ನೋಡುತ್ತಿದೆ. ನನ್ನ ತಾಯಿ ನನ್ನನ್ನ ಗರ್ಭ ಧರಿಸಿದಾಗಲೂ ನಾನು ಹೀಗೆಯೆ ಕುಳಿತಿದ್ದೆನೊ ಏನೊ? ನನ್ನ ದೇಹಕ್ಕೆ 9 ತಿಂಗಳು ತುಂಬಿಕೊಂಡು ಮೈಕೈ ಪಡೆದುಕೊಂಡ ಮೇಲೆ ನಾನು ತಾಯಿಯ ಗರ್ಭದಿಂದ ಹೊರಕ್ಕೆ ಬಂದ ತಕ್ಷಣವೇ ಚಿಟ್ಟನೆ ಚೀರಿಕೊಂಡು ವಾಯುಮಂಡಲದಲ್ಲಿನ ಪ್ರಾಣವಾಯು ನನ್ನ ಬಾಯಿಯ ಮೂಲಕ ನನ್ನ ದೇಹ ಸೇರಿ ನಾನು ಈ ಭೂಮಿಗೆ ಬಂದಾಗಲಿಂದಲೂ ಪ್ರಾಣವಾಯು ನನ್ನನ್ನು ಬಿಟ್ಟು ಹೋಗಿರಲಿಲ್ಲ. ಆದರೆ ಈ ದಿನ ಅದೇಕೊ ನನ್ನ ದೇಹವನ್ನು ಬಿಟ್ಟು ದೂರ ಹೋಗಿಯೇ ಬಿಟ್ಟಿದೆ. ಅದು ನನ್ನ ನಿರ್ವಿಕಾರವಾದ ಆತ್ಮವೊ ಅಥವಾ ಪ್ರೇತಾತ್ಮವೊ ಈಗ ಗೋಡೆಯ ಮೇಲೆ ಕುಳಿತಿದೆ. ಒಟ್ಟಿನಲ್ಲಿ ನನ್ನ ದೇಹದಿಂದ ಸಂಪೂರ್ಣವಾಗಿ ಪ್ರಾಣ ಹೋಗಲಿಲ್ಲ ಎನಿಸುತ್ತಿದೆ? 45 ವರ್ಷಗಳ ಕಾಲ ನನ್ನ ಜೊತೆಗೆ ಹೋರಾಡಿ ಬದುಕು ನಡೆಸಿದ್ದ ನನ್ನ ಆತ್ಮದ ಒಂದು ಭಾಗದಂತಿದ್ದ ಸಾವಿತ್ರಿ ಪ್ರಜ್ಞೆ ತಪ್ಪಿದ್ದರೂ ನನ್ನ ದೇಹದ ಕಡೆಗೆ ನೋಡುತ್ತಲೇ ಇದ್ದಳು. ಕೆಲವೊಂದು ಸಲ ಸಂಪೂರ್ಣವಾಗಿ ಚೈತನ್ಯ ಕಳೆದುಕೊಂಡವಳಂತೆ ನೆಲಕ್ಕೆ ಬೀಳುತ್ತಿದ್ದಳು.

ಈಗ ನಾನು, ನನ್ನ ದೇಹದ ಸುತ್ತಲೂ ನೆರೆದಿರುವವರನ್ನೆಲ್ಲ ನೋಡುತ್ತಿದ್ದೇನೆ. ಕತ್ತಲಾದಂತೆ ನನ್ನ ಕಣ್ಣುಗಳಿಗೆ ಎಲ್ಲವೂ ಸ್ಪಷ್ಟವಾಗಿ ಕಾಣಿಸುತ್ತಿದೆ. ಅವರೆಲ್ಲ ಮಾತನಾಡುವುದೂ ಚೆನ್ನಾಗಿ ಕೇಳಿಸುತ್ತಿದೆ. ಒಳ್ಳೆಯದೇ ಆಯಿತು. ನಾನು ಹುಟ್ಟಿದ ಊರಿನಲ್ಲೆ ಪ್ರಾಣ ಬಿಟ್ಟಿದ್ದು. ಇಡೀ ಪ್ರಪಂಚವೆಲ್ಲ ಸುತ್ತಿಕೊಂಡು ಬಂದು ಕೊನೆಗೆ ತಾನು ಹುಟ್ಟಿದ ಮಣ್ಣಿನಲ್ಲೆ ಪ್ರಾಣ ಬಿಟ್ಟರುವೆ. ಅಥವಾ ಪ್ರಾಣ ತೆಗೆದರು. ಎಲ್ಲದಕ್ಕೂ ಅದೃಷ್ಟ ಇರಬೇಕು. ಇನ್ನು ನನ್ನನ್ನ ಮಣ್ಣು ಮಾಡುವುದು ನಾಳೆ ಸಾಯಂಕಾಲವೇ ಇರಬೇಕು. ಅಲ್ಲಿ ನಿಂತಿದ್ದವರಲ್ಲಿ ಒಬ್ಬರು `ರಾತ್ರಿ ಹೊತ್ತು ಹೆಣಾನ ಮನೆ ಒಳಗಡೆ ಇಟ್ಟುಕೊಳ್ಳುವುದು ಸರಿಯಲ್ಲ. ಮನೆ ಹೊರಗಡೆ ಇಡಬೇಕು. ಅದಕ್ಕೆ ಏನಾದರೂ ವ್ಯವಸ್ಥೆ ಮಾಡಬೇಕಲ್ಲ' ಎಂದರು. ಇನ್ನೊಬ್ಬರು, `ಅವರ್ದೆ ಮನೆ. ಒಳಗೇನೆ ಇರ್ಲಿ ಬಿಡಿ' ಅಂದರೆ. `ಅರೆ ಎಲ್ಲಾದರು ಉಂಟೆ? ನಾಳೆ ಈ ಮನೆಯಲ್ಲಿ ಯಾರೂ ಇರುವುದಿಲ್ಲವೇನು?' ಹೀಗೆ ಒಬ್ಬರಿಗೊಬ್ಬರು ಮಾತನಾಡುತ್ತ ನನ್ನ ದೇಹವನ್ನು ಮನೆಯಿಂದ ಹೊರಗಿಡಲು ವ್ಯವಸ್ಥೆ ನಡೆಯುತ್ತಿತ್ತು. ಹೊರಗಡೆ ಮರಗಳ ಮೇಲೆ ನಾಲ್ಕು ಒಣಗಿರುವ ಕೊಂಬೆಗಳನ್ನು ಹಾಕಿ ಸಣ್ಣದಾಗಿ ಅದರ ಮೇಲೆ ನೀಲಿ ಪ್ಲ್ಯಾಸ್ಟಿಕ್ ಶೀಟನ್ನು ಹೊದಿಸಲಾಯಿತು.

ಅಷ್ಟರಲ್ಲಿ ಕೆಲವರು ಸಣ್ಣಪುಟ್ಟ ವಾದ್ಯಗಳನ್ನು ಕೈಗಳಲ್ಲಿ ಹಿಡಿದುಕೊಂಡು ಬಂದು ಮನೆಯ ಹೊರಗೆ ನಿಂತುಕೊಂಡಿದ್ದರು. ನನ್ನ ದೇಹವನ್ನು ಹೊರಕ್ಕೆ ತೆಗೆದುಕೊಂಡು ಬಂದು ನಾನು ಪ್ರಾಣ ಬಿಟ್ಟ ಮಂಚದ ಮೇಲೆಯೇ ಮಲಗಿಸಿದರು. ಸುತ್ತಲೂ ನೆರೆದಿದ್ದವರೆಲ್ಲ ಬಾಯಿಗೊಂದು ಮಾತನಾಡುತ್ತಿದ್ದರು. ಹಾಡುಗಾರರು `ನೀವ್ಯಾಕ್ರಪ್ಪ ಸುಮ್ಮನೆ ಕುಳಿತಿರುವುದು? ಶುರು ಮಾಡಿ' ಎಂದರೆ. ಇನ್ಯಾರೋ ಒಬ್ಬರು `ಚಳಿಯಲ್ಲಿ ಅವ್ರು ಯ್ಯಾಗೆ ಶುರು ಮಾಡುವುದು? ಬಾಯಿಗೆ ಏನಾದ್ರು ಬೀಳಬೇಕಲ್ಲ?' ಎಂದಿದ್ದೆ. ಒಬ್ಬರು 'ಏಯ್ ಹೋಗಿ ಆ ವೆಂಕಟಮ್ಮನ ಅಂಗಡಿಯಲ್ಲಿ ನಾಲ್ಕೈದು ಬಾಟ್ಲು ಹಿಡ್ಕೊಂಡು ಬಂದು ಕೊಡ್ರೊ ಇವ್ರ್ಗೆ' ಎಂದರು. ಚಳಿಗಾಲವಾದ್ದರಿಂದ ಹಳ್ಳಿ ಹಾಡುಗಾರರು ಟವಲು ಮತ್ತು ಇನ್ಯಾವುದೊ ಬಟ್ಟೆಗಳಿಂದ ತಲೆಗಳನ್ನು ಸುತ್ತಿಕೊಂಡು ಬಂದಿದ್ದರು. ವೆಂಕಟಮ್ಮನ ಅಂಗಡಿಗೆ ಹೋಗಿ ನಾಲ್ಕಾರು ಬ್ರ್ಯಾಂಡಿ ಬಾಟಲುಗಳನ್ನು ತೆಗೆದುಕೊಂಡು ಬಂದು, `ನೋಡ್ರಪ್ಪ ನಿಮ್ಮ ಐಟಂಗಳು ಬಂದಿವೆ. ಬಾಯಿಗೆ ಸುರ್ಕೊಂಡು ರೆಡಿಯಾಗಿ. ರಾತ್ರಿಯಲ್ಲ ಹಾಡ್ತಾನಾ ಇರ್ಬೇಕು. ನಿದ್ದೆಗಿದ್ದೆ ಹೊಡೆದುಬಿಟ್ಟೀರ. ಹುಷಾರ್' ಎಂದಿದ್ದೆ